ಸಿಸಿನಂ. 92/2022
ಪಿಡಬ್ಲ್ಯೂ: 2

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.</u>

ಸಿಸಿ ನಂ. 92/2022
ಪಿಡಬ್ಲೂ : 2

| | | |
|---|---|---|
| ಹೆಸರು | : | ಶ್ರೀ ಶಿವಾನಂದ |
| ತಂದೆಯ ಹೆಸರು | : | ರಾಮಚಂದ್ರ ನಾಯ್ಕ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಸಿ ಹೆಚ್ ಸಿ 860 ಅಂಕೋಲಾ ಪೋಲಿಸ್ ಠಾಣೆ |
| ವಾಸ್ತವ್ಯ | : | ಅಂಕೋಲಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 13-03-2026 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**<u>ಮುಖ್ಯ ವಿಚಾರಣೆ : ದಂಡ ಪ್ರಕ್ರೀಯೆ ಸಂಹಿತೆ ಕಲಂ 299 ರಡಿಯಲ್ಲಿ ಪಿರ್ಯಾದುದಾರರ ಪರವಾಗಿ :</u> ಶ್ರೀ ವಿ ಪಿ ಟಿ <u>ವಕೀಲರಿಂದ :</u>**

ನಾನು ಮಾರ್ಚ 2018 ರಿಂದ ಅಗಷ್ಟ 2024 ರವರೆಗೆ ಕುಮಟಾ ಆರಕ್ಷಕ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ .

2. ದಿಃ 05-10-2022 ರಂದು ನಮ್ಮ ಪಿಐ ಸಾಹೇಬರ ಆದೇಶದ ಮೇರೆಗೆ ಸಿಸಿ ನಂ. 92/2022 ರಲ್ಲಿ ಆರೋಪಿತನಾದ ಬಿ ರಮೇಶ ಬಿನ್ ಬಸವರಾಜಪ್ಪ ಇತನ ವಿರುದ್ಧ ಜಾಹೀರ ಪ್ರಕಟಣಾ ಪಂಚನಾಮೆಯಂತೆ ಆರೋಪಿಯ ಮನೆ ಇರುವ ಹಿರೇಹಳ್ಳಿಗೆ ಹೋಗಿ ನೋಡಲಾಗಿ ಮನೆಯಲ್ಲಿ ಯಾರು ಇರಲಿಲ್ಲ. ಆರೋಪಿತನ ಮನೆಗೆ ಪಂಚರಾದ ಶ್ರೀಧರ ಆರ್ ಕೆ ಇನಾಮತಹಳ್ಳಿ ಹಾಗೂ ಅರುಣ ತಂದೆ ಆನಂದಪ್ಪ ಶಿರೇಹಳ್ಳಿ ಇವರನ್ನು ಬರಮಾಡಿಕೊಂಡು ಪಾಳು ಬಿದ್ದ ಆರೋಪಿತನ ಮನೆಯ ಮುಂದೆ ಸಾರ್ವಜನಿಕರನ್ನು ಪಂಚರನ್ನು ಬರಮಾಡಿಕೊಂಡು ಉಘ್ಘೋಷಣಾ ಪ್ರತಿಯನ್ನು ಸಾರ್ವಜನಿಕರಿಗೆ ಅರ್ಥವಾಗುವ ರೀತಿಯಲ್ಲಿ ದೊಡ್ಡದಾಗಿ ಓದಿ ಹೇಳಿ ತಿಳಿಸಿ ಒಂದು ಪ್ರತಿಯನ್ನು ಆರೋಪಿಯ ಮನೆಯ

ಸಿಸಿನಂ. 92/2022

ಪಿಡಬ್ಲ್ಯೂ: 2

ಗೋಡೆ ಅಂಟಿಸಿರುತ್ತೇನೆ. ಹಾಗೆಯೇ ಇನ್ನೊಂದು ಪ್ರತಿಯನ್ನು ಸಾರ್ವಜನಿಕರು ಸೇರುವ ಭೋವಿ ಸಿದ್ದರಾಮೇಶ್ವರ ದೇವಸ್ಥಾನದ ಹತ್ತಿರ ಇರುವ ಗೋಡೆಗೆ ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಉಘೋಷಣಾ ಪ್ರತಿಯನ್ನು ಅಂಟಿಸಿರುತ್ತೇನೆ. ನಂತರ ಅಗ್ರಹಾರ ಹತ್ತಿರ ಇರುವ ಪಂಚಾಯತ್ ನೋಟಿಸ್ ಬೋರ್ಡಿಗೆ ಪಂಚರ ಸಮಕ್ಷಮ ಉಘೋಷಣಾ ಪ್ರತಿಯನ್ನು ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಅಂಟಿಸಿರುತ್ತೇನೆ.

ಪಂಚನಾಮೆಯನ್ನು ಮಧ್ಯಾಹ್ನ 1-50 ಗಂಟೆಯಿಂದ 2-50 ಗಂಟೆಯವರೆಗೆ ಸ್ಥಳದಲ್ಲಿ ಮಾಡಿರುತ್ತೇವೆ. ಸಾಕ್ಷಿ ಸ್ಥಳದಲ್ಲಿ ತಯಾರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ನಿಪಿ -9 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -9(ಎ) ಎಂದು ಗುರುತಿಸಲಾಯಿತು. ಪಂಚರ ಸಹಿಯನ್ನು ನಿಪಿ-9(ಬಿ) ಮತ್ತು 9(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರೋಕ್ಲಮೇಶನ್ ವರದಿಯನ್ನು ನೋಡಿ ಗುರುತಿಸಿದ್ದು ನಿಪಿ -10 ಎಂದು , ಸಾಕ್ಷಿಯ ಸಹಿಯನ್ನು ನಿಪಿ -10(ಎ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.